ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-2 Issue 4, JAN-FEB 2021, 34-39
©*IIMRD*, Mysuru

IIMRD JOURNALS
www.iimrd.com

# ಕಲ್ಯಾಣಿ ಚಾಲುಕ್ಯರ ಕಾಲದ ಧಾರ್ಮಿಕ ಪರಿಸ್ಥಿತಿ

**ಅರುಣ್ ಕುಮಾರ್ ಬಿ.[1] ಮತ್ತು ಪ್ರೊ. ನಿರ್ಮಲ್ ರಾಜು[2]**

**ಪೀಠಿಕೆ**

ಕಲ್ಯಾಣ ಚಾಲುಕ್ಯರ ಆಡಳಿತಾವಧಿಯು ಭಾರತೀಯ ಮಧ್ಯಯುಗಿನ ಕಾಲದ ಸಂದರ್ಭವನ್ನು ಪ್ರತಿನಿಧಿಸುತ್ತದೆ. ಆ ಕಾಲದ ಧಾರ್ಮಿಕ ಪರಿಸ್ಥಿತಿಯು ಅತ್ಯಂತ ವೈವಿಧ್ಯ ಹಾಗೂ ವೈರುಧ್ಯಗಳಿಂದ ಕೂಡಿತ್ತು. ಸಂಕೀರ್ಣವಾದ ಮತ್ತು ಕ್ಲಿಷ್ಟಕರವಾದ ಅನೇಕ ಬೆಳವಣಿಗೆಗಳು ಆ ಕಾಲದಲ್ಲಿ ಕಂಡುಬರುತ್ತವೆ. ಅಖಿಲ ಭಾರತ ಮಟ್ಟದಲ್ಲಿ ವಿಶೇಷವಾಗಿ ಉತ್ತರ ಭಾರತದಲ್ಲಿ ಸಂಘರ್ಷಮಯ ವಾತಾವರಣವು ಕಾಣಿಸಿಕೊಂಡಿತ್ತು. ಇದಕ್ಕೆ ಕಾರಣ ಪಶ್ಚಿಮ ಏಷ್ಯಾದಿಂದ ಎರಗಿ ಬಂದ ಅಕ್ರಮಣಗಳು. ಅರಬ್ಬರು, ಟರ್ಕರು, ಆಫ್ಘನ್ನರು ಮೊದಲಾದವರ ಸೈನಿಕ ಕಾರ್ಯಾಚರಣೆಗಳಿಂದ ಸಂಪನ್ಮೂಲಗಳ ಕೊಳ್ಳೆ, ಅಧಿಕಾರ ಅಥವಾ ಪ್ರಭುತ್ವದ ಸ್ಥಾಪನೆ ಹಾಗೂ ವಿಸ್ತರಣೆ ತೀವ್ರವಾಯಿತು. ಇದು ಕೇವಲ ರಾಜಕೀಯವಾಗಿ ಸ್ವದೇಶಿ ಮತ್ತು ವಿದೇಶಿಯರ ನಡುವೆ ನಡೆದ ರಾಜಕೀಯ ಘರ್ಷಣೆ ಮಾತ್ರವಾಗಿರದೆ ಪರಸ್ಪರ ವಿರೋಧಿ ಸಾಂಸ್ಕೃತಿಕ ಪರಂಪರೆಗಳ ಮತ್ತು ಚಿಂತನೆಗಳ ನಡುವಣ ಸಂಘರ್ಷವಾಗಿತ್ತು. ಜಾಗೀರ್‌ದಾರ್ ಹಾಗೂ ಉಂಬಳಿಗಮಾನ್ಯ ವ್ಯವಸ್ಥೆಯಂತಹ ಎರಡು ಆಧಾರಸ್ಥಂಭಗಳನ್ನು ಹೊಂದಿದ್ದ ಸ್ವದೇಶಿ ರಾಜಮನೆತನವಾದ ರಜಪೂತರು ಮತ್ತು ಪಶ್ಚಿಮ ಏಷ್ಯಾದ ವಿವಿಧ ಸಮುದಾಯಗಳ ನಡುವೆ, ಸಾಂಸ್ಕೃತಿಕ ಸಂಪ್ರದಾಯಗಳ ನಡುವೆ, ಧರ್ಮ, ತತ್ವ ಮತ್ತು ಚಿಂತನೆಗಳ ನಡುವೆ ನಡೆದ ಸಂಘರ್ಷವಾಗಿತ್ತು. ಅಂದರೆ ಭಾರತೀಯ ಧರ್ಮ ಮತ್ತು ಸಂಸ್ಕೃತಿಗಳು ಪರಕೀಯ ಧರ್ಮ ಮತ್ತು ಸಂಸ್ಕೃತಿಗಳ ನಡುವಣ ಘರ್ಷಣೆಯಾಗಿತ್ತು. ಸಹಜವಾಗಿ ಇದು ಅಂದಿನ ಧಾರ್ಮಿಕ ನಂಬಿಕೆಗಳು, ಆಚರಣೆಗಳು, ತತ್ವಗಳು ಮುಂತಾದವುಗಳ ಮೇಲೆ ನಡೆದ ಆಕ್ರಮಣವಾಗಿದ್ದವು.

ಮೇಲ್ಕಂಡ ಭಾರತದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ದಕ್ಷಿಣ ಭಾರತದಲ್ಲಿ ವೈದಿಕ ಪಂಥಗಳಾದ ಶೈವ ಮತ್ತು ವೈಷ್ಣವರ ನಡುವೆ ಘರ್ಷಣೆಗಳು ಸಂಭವಿಸಿದ್ದವು. ದಕ್ಷಿಣ ಭಾರತದ ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಸಾರ್ವಭೌಮತ್ವಕ್ಕಾಗಿ ಕನ್ನಡನಾಡಿನ ಚಾಲುಕ್ಯರಿಗೂ ತಮಿಳುನಾಡಿನ

[1] *ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–ಕೊಣಾಜೆ.*

[2] *ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–ಕೊಣಾಜೆ.*

ಚೋಳರಿಗೂ ಶತ್ರುತ್ವವಿದ್ದಂತೆ ಶೈವ ಮತ್ತು ವೈಷ್ಣವ ಪಂಥಗಳ ನಡುವೆ ಸಾಮರಸ್ಯದ ಕೊರತೆ ಎದ್ದು ಕಾಣುತ್ತದೆ. ಇದು ಶೈವ ಮತ್ತು ವೈಷ್ಣವ ಪಂಥಗಳ ನಡುವಣ ಸಂಘರ್ಷಕ್ಕೆ ಚೋಳರ ಮತ್ತು ಚಾಲುಕ್ಯರ ಪ್ರಚೋಧನೆಯು ಇತ್ತೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಆದುದರಿಂದಲೇ ಶೈವ ಧರ್ಮದ ಆಂತರ್ಯದಲ್ಲಿ ವೀರಶೈವ ಪಂಥವು ಮತ್ತು ವೈಷ್ಣವ ಪರಂಪರೆಯ ಅಂತರಾಳದಲ್ಲಿ ಶ್ರೀ ವೈಷ್ಣವ ಪರಂಪರೆಯು ಕಾಣಿಸಿಕೊಂಡಿತು. ಆದುದರಿಂದಲೇ ದಕ್ಷಿಣ ಭಾರತದಲ್ಲಿ ಧಾರ್ಮಿಕ ಸುಧಾರಣ ಚಳುವಳಿಗಳು ಕಾಣಿಸಿಕೊಂಡವು. ಈ ಸುಧಾರಣೆಗಳಿಗೆ ತಮಿಳುನಾಡಿನ ಶ್ರೀರಾಮಾನುಜಾಚಾರ್ಯರು ಮತ್ತು ಕನ್ನಡನಾಡಿನ ಶರಣರು ಕಾರಣಕರ್ತೃಗಳಾಗಿದ್ದರು.

ಪ್ರಾಚೀನ ಕರ್ನಾಟಕದಲ್ಲಿನ ಧಾರ್ಮಿಕ ಜೀವನವನ್ನು ನಾವು ಗಮನಿಸಿದಾಗ ಹಿಂದಿನಿಂದಲೂ ಹಲವಾರು ಧರ್ಮಗಳು ಬೆಳೆದು ಬಂದಿವೆ. ಇಲ್ಲಿನ ಜನತೆಯ ಧಾರ್ಮಿಕ ಶ್ರದ್ಧೆ, ಸಮನ್ವಯತೆ, ಔದಾರ್ಯ ಹಾಗೂ ಪ್ರಾದೇಶಿಕ ವಾತಾವರಣ ಪ್ರಾಚೀನ ಕಾಲದಿಂದಲೂ ಮುಂದುವರೆದುಕೊಂಡು ಬಂದಿದೆ. ಸಾಮಾನ್ಯವಾಗಿ ಭಾರತದ ಧಾರ್ಮಿಕ ಪರಿಸ್ಥಿತಿಯ ಬೆಳವಣಿಗೆಯನ್ನು ಗಮನಿಸಿದಾಗ ವೈದಿಕ ಧರ್ಮವೇ ಅತ್ಯಂತ ಪ್ರಾಚೀನ ಧರ್ಮವೆಂದು ತಿಳಿಯುತ್ತದೆ. ಹರಪ್ಪ ಸಂಸ್ಕೃತಿಯಲ್ಲಿ ಕಂಡುಬರುವ ಹಲವಾರು ದೇವತಾ ಮೂರ್ತಿಗಳು ಮತ್ತು ಆಕೃತಿಗಳು ಶಿವನ ಆರಾಧನೆಯನ್ನು ಪ್ರತಿಬಿಂಬಿಸುತ್ತವೆಯಾದರೂ ಅದರಲ್ಲಿ ಸ್ಪಷ್ಠತೆ ಇಲ್ಲ. ಹೀಗಾಗಿ ವಿಭಿನ್ನ ಧಾರ್ಮಿಕ ಪಂಥಗಳು ವೈದಿಕ ಯುಗದಿಂದಲೇ ಬೆಳೆದು ಬಂದವು. ಶೈವ, ವೈಷ್ಣವ, ಶಾಕ್ತ ಅಲ್ಲದೆ ಕ್ರಿ.ಪೂ. 6ನೇ ಶತಮಾನದಲ್ಲಿ ಉಗಮವಾದ ಜೈನ ಮತ್ತು ಬೌದ್ಧ ಧರ್ಮಗಳು ಭಾರತ ದೇಶದ ಮತ್ತು ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ತಮ್ಮದೇ ಆದಂತಹ ಸ್ಥಾನಮಾನಗಳನ್ನು ಪಡೆದುಕೊಂಡು ಬೆಳವಣಿಗೆ ಹೊಂದಿವೆ. ಚಾಲುಕ್ಯರು ಮೂಲತಃ ವಿಷ್ಣುವಿನ ಆರಾಧಕರು. ಆದಾಗ್ಯೂ ಸಾಕಷ್ಟು ಸಂಖ್ಯೆಯಲ್ಲಿ ಶಿವ, ವೈಷ್ಣವ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಶೈವರು ಶಿವನನ್ನು ಹಲವು ನಾಮಾಂಕಿತಗಳಿಂದ ಆರಾಧಿಸುತ್ತಾರೆ. ಅಮರಸಿಂಹನ ಅಮರಕೋಶವು ಶಿವನ 48 ಹೆಸರುಗಳನ್ನು ಉಲ್ಲೇಖಿಸಿದರೆ, ವಾಜಸೇನೆಯ ಸಂಹಿತವು ಸಹ ಶಿವನನ್ನು ಅಗ್ನಿ, ಅವನಿ, ಪಶುಪತಿ, ಭವ, ಸರ್ವ, ಈಶಾನ್ಯ, ಮಹಾದೇವ, ಉಗ್ರದೇವ, ಅರ್ಕೇಶ್ವರ, ದೇಸೇಶ್ವರ, ಮಲ್ಲಿಕಾರ್ಜುನ, ನೀಲಕಂಠ, ಸೋಮೇಶ್ವರ, ಮಹದೇಶ್ವರ, ಗಂಗಾಧರೇಶ್ವರ, ದಿವ್ಯಲಿಂಗೇಶ್ವರ, ಬ್ರಹ್ಮೇಶ್ವರ, ಮಹೇಶ್ವರ, ಸಿದ್ಧಲಿಂಗೇಶ್ವರ, ಭೈರವೇಶ್ವರ ಇನ್ನೂ ಮೊದಲಾದ ಹೆಸರುಗಳಿಂದ ಗುರುತಿಸುತ್ತದೆ. ಈ ಹಿನ್ನೆಲೆಯಿಂದ ಚಾಲುಕ್ಯರ ಕಾಲದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶೈವ ದೇವಾಲಯಗಳು ನಿರ್ಮಾಣಗೊಂಡಿವೆ.

ಚಾಲುಕ್ಯರ ಕಾಲದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೈಷ್ಣವ ದೇವಾಲಯಗಳು ಸಹ ನಿರ್ಮಾಣಗೊಂಡಿರುವುದನ್ನು ಕಾಣಬಹುದಾಗಿದೆ. ಹಿಂದೂ ಧರ್ಮದಲ್ಲಿ ವೈಷ್ಣವ ಧರ್ಮವು ಪ್ರಾಚೀನ ಭಾರತದ ಧರ್ಮಗಳಲ್ಲಿ ಒಂದಾಗಿದ್ದು ವೈಷ್ಣವ ಧರ್ಮದ ಮೂಲ ಪುರುಷ

ವಿಷ್ಣುವಾಗಿದ್ದಾನೆ. ಪ್ರಾಚೀನ ಭಾರತದಲ್ಲೇ ವೈಷ್ಣವ ಧರ್ಮ ಅಂದರೆ (ಭಾಗವತದ) ಉಗಮವನ್ನು ಕಾಣಬಹುದು. ವೈದಿಕ ಯುಗದಲ್ಲಿ ಆರ್ಯರು ವಿಷ್ಣುವಿಗೆ ನೀಡಿದ ಮಹತ್ವ ಇವನನ್ನು ಪ್ರಧಾನ ದೇವತೆಗಳ ಸಾಲಿನಲ್ಲಿ ನಿಲ್ಲಿಸಿತು ಎಂದು ತಿಳಿದುಬರುತ್ತದೆ. ವಿಷ್ಣುವು ಜನರಿಂದ ರೂಪುಗೊಂಡು ವಿವಿಧ ಪೂಜಾ ವಿಧಾನಗಳು ಏರ್ಪಟ್ಟವು.

ಜೈನ ಧರ್ಮವು ಕರ್ನಾಟಕದಲ್ಲಿ ವ್ಯಾಪಕವಾಗಿ ಬಾಳಿ ಬದುಕಿದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಕರ್ನಾಟಕದಲ್ಲಿ ಕ್ರಿ.ಪೂ. ದಲ್ಲಿಯೇ ಅಸ್ತಿತ್ವದಲ್ಲಿತ್ತೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕರ್ನಾಟಕದ ಎಲ್ಲಾ ಪ್ರಮುಖ ರಾಜಮನೆತನಗಳು ಜೈನ ಧರ್ಮಕ್ಕೆ ವಿಶೇಷ ಪ್ರೋತ್ಸಾಹವನ್ನು ನೀಡಿವೆ. ಅನೇಕ ರಾಜರು ಜೈನ ಧರ್ಮಕ್ಕೆ ತಮ್ಮ ಬೆಂಬಲ, ಪ್ರೋತ್ಸಾಹ, ದಾನದತ್ತಿಗಳನ್ನು ಮುಂದುವರೆಸಿದಂತೆ ಕಲ್ಯಾಣ ಚಾಲುಕ್ಯ ರಾಜರು, ರಾಣಿಯರು ಮತ್ತು ಇತರ ಪ್ರಮುಖ ಅಧಿಕಾರ ವರ್ಗದವರು ಜಿನಾಲಯ ನಿರ್ಮಾಣ, ಜೀರ್ಣೋದ್ಧಾರ ಕಾರ್ಯ ಮತ್ತು ದಾನ ಕಾರ್ಯಗಳನ್ನು ಕೈಗೊಂಡಿರುವುದು ಕಂಡುಬರುತ್ತದೆ. ಕಲ್ಯಾಣ ಚಾಲುಕ್ಯರ ಕಾಲದ ಧಾರ್ಮಿಕ ಆಚರಣೆಗಳು, ರೂಢಿಸಂಪ್ರದಾಯಗಳು, ವಿಧಿವಿಧಾನಗಳು ಮುಂತಾದವುಗಳನ್ನು ಕುರಿತು ಅಧ್ಯಯನ ಕೈಗೊಂಡಾಗ ತಮ್ಮದೇ ಆದ ರೀತಿಯಲ್ಲಿ ಸಾಮಾಜಿಕ ಸಾಮರಸ್ಯ, ಐಕ್ಯತೆ, ಸಮಗ್ರತೆಯನ್ನು ಎತ್ತಿ ಹಿಡಿಯಲು ಪ್ರಯತ್ನಿಸಿರುವುದನ್ನು ಆ ಮೂಲಕ ತಮ್ಮದೇ ಆದ ವಿಶಿಷ್ಟ ಸಾಂಸ್ಕೃತಿಕ ಮುದ್ರೆ ಒತ್ತಿರುವುದಕ್ಕೆ ಸಾಕಷ್ಟು ಆಧಾರಗಳಿವೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಎಲ್ಲಾ ಪ್ರಮುಖ ಧರ್ಮಗಳು ಪ್ರಚಾರದಲ್ಲಿದ್ದವು. ಚಾಲುಕ್ಯರು ವೈಷ್ಣವರಾಗಿದ್ದರೂ ಸರ್ವಧರ್ಮಿಯರಿಗೆ ಉದಾರ ಆಶ್ರಯ ಹಾಗೂ ದತ್ತಿಯನ್ನು ನೀಡುವುದರ ಮೂಲಕ "ಧಾರ್ಮಿಕ ಸಾಮರಸ್ಯ"ವನ್ನು ಕಾಯ್ದುಕೊಂಡು ಹೋಗುವಲ್ಲಿ ಯಶಸ್ವಿಯಾಗಿದ್ದರು. ಶೈವ ಮತ್ತು ವೈಷ್ಣವ ಮತಗಳು ಪ್ರಬಲವಾಗಿದ್ದವು. ಪಾಶುಪತ, ಕಾಳಾಮುಖ ಮತ್ತು ಶಾಕ್ತಧರ್ಮಾನುಯಾಯಿಗಳು ಸಾಮ್ರಾಜ್ಯದಾದ್ಯಂತ ಇದ್ದರು. ಉದಾಹರಣೆಗೆ ಒಂದನೇ ಸೋಮೇಶ್ವರನ ರಾಣಿ ಮೈಲಾಳದೇವಿ ಅನೇಕ ದಾನದತ್ತಿಗಳನ್ನು ಪಾಶುಪಥ ಪಂಥಕ್ಕೆ ನೀಡಿದ್ದಳು. ಕಾರ್ತಿಕೇಯ ಮತ್ತು ವಿಷ್ಣುವಿನ ಆರಾಧನೆಯ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ಹನುಮಂತ, ವಿನಾಯಕ, ನಂದಿ, ಸೂರ್ಯ, ಚಂದ್ರ, ಭೈರವ ಮತ್ತು ದುರ್ಗಾ ದೇವರುಗಳ ಆರಾಧನೆಯೂ ಕೂಡ ಪ್ರಚಲಿತದಲ್ಲಿತ್ತು. ಕೊಲ್ಲಾಪುರದ ಮಹಾಲಕ್ಷ್ಮಿ ದೇವಾಲಯ ಶಕ್ತಿಪೂಜೆಯ ಕೇಂದ್ರವಾಗಿತ್ತು. ಈ ಕಾಲದಲ್ಲಿ ಧಾರ್ಮಿಕ ರಂಗದಲ್ಲಿ ಉಂಟಾದ ಮಹತ್ತರ ಬೆಳವಣಿಗೆ ಎಂದರೆ ವೀರಶೈವ ಧರ್ಮದ ಏಳಿಗೆ. ಇವರ ಕಾಲದಲ್ಲಿ ಶೈವಧರ್ಮದಲ್ಲಿ ಅನೇಕ ರೀತಿಯ ಸಂಪ್ರದಾಯಗಳು ಮತ್ತು ಅರ್ಥವಿಲ್ಲದ ಆಚರಣೆಗಳಿಂದಾಗಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳಲು ಪ್ರಾರಂಭಿಸಿತು. ಶೈವ ಧರ್ಮದ ತತ್ವಗಳನ್ನು ಪುನರುಜ್ಜೀವನಗೊಳಿಸುವುದರಲ್ಲಿ ಶಿವಶರಣರು ಪ್ರಧಾನ ಪಾತ್ರವಹಿಸಿದರು.

ಶೈವಧರ್ಮದ ಅನುಯಾಯಿಗಳಲ್ಲಿ ಹೋರಾಟ ಪ್ರವೃತ್ತಿ ಬೆಳೆಯುವಂತೆ ಪ್ರೇರೇಪಿಸಿ ಇತರ ಧರ್ಮೀಯರನ್ನು ಕೀಳುಮಟ್ಟದಿಂದ ಕಾಣುವ ಭಾವನೆ ಬೆಳೆಯಲು ಕಾರಣರಾದರು. ಇಂತಹ ಸಂದರ್ಭದಲ್ಲಿ ಬಸವಣ್ಣನವರು ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಬದಲಾವಣೆ ಅವಶ್ಯಕ ಎಂದು ಮನಗಂಡರು. ಅವರು ಶೈವಧರ್ಮಕ್ಕೆ ಸಂಬಂಧಿಸಿದ ತತ್ವವನ್ನು ಬೋಧಿಸಿದರು. ಆದರೆ ಈ ಬೋಧನೆ ಹೆಚ್ಚು ಶೌರ್ಯದಿಂದ ಕೂಡಿತ್ತು. ಆದ್ದರಿಂದ ಅವರು ಪ್ರತಿಪಾದಿಸಿದ ಶೈವಧರ್ಮಕ್ಕೆ ವೀರಶೈವಧರ್ಮ ಎಂದು ಹೆಸರು ಬಂದಿತು. ವೀರಶೈವ ಧರ್ಮದ ಬೋಧನೆಗಳು ವಚನಗಳ ಮೂಲಕ ಜನಪ್ರಿಯವಾದವು. ಒಟ್ಟಿನಲ್ಲಿ ವೀರಶೈವ ಪಂಥದ ಏಳಿಗೆಯಿಂದ ಸಾಮಾಜಿಕ ಜೀವನದಲ್ಲಿ ಅನೇಕ ಬದಲಾವಣೆಗಳಾದವು. ಇದರಿಂದ ಸಮಾಜದಲ್ಲಿ ಜಾತೀಯತೆಯ ಪ್ರಭಾವ ಕಡಿಮೆಯಾಗಿ ಸಮಾನತೆ ಕಂಡುಬಂದಿತು.

ಚಾಲುಕ್ಯರು ಜೈನಧರ್ಮಕ್ಕೂ ಪ್ರೋತ್ಸಾಹ ನೀಡಿದರು. ಆದರೆ ಶೈವಮತ ಮತ್ತು ವೈಷ್ಣವ ಮತಗಳ ಪ್ರಭಾವದಿಂದಾಗಿ ಜೈನಮತ ತನ್ನ ಪ್ರಭಾವವನ್ನು ತೀವ್ರವಾಗಿ ಕಳೆದುಕೊಳ್ಳಲಾರಂಭಿಸಿತು. ಆದ್ದರಿಂದ ಜೈನರು ತಮ್ಮ ಮತವನ್ನು ರಕ್ಷಿಸಿ ಜನಪ್ರಿಯಗೊಳಿಸುವ ಪ್ರಯತ್ನ ಮಾಡಬೇಕಾಯಿತು. ಹೀಗಾಗಿ ಜೈನಧರ್ಮ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ತನ್ನ ಪ್ರಸಿದ್ಧಿಯನ್ನು ಉಳಿಸಿಕೊಂಡಿತು. ಎರಡನೇ ತೈಲಪ್ಪ ಮತ್ತು ಸತ್ಯಾಶ್ರಯ ಜೈನಕವಿ ರನ್ನನಿಗೆ ಆಶ್ರಯ ನೀಡಿದ್ದರು. ಸತ್ಯಾಶ್ರಯನು ಜೈನಗುರು ವಿಮಲಚಂದ್ರಪಂಡಿತದೇವನಿಂದ ಆಧ್ಯಾತ್ಮಿಕ ಮಾರ್ಗದರ್ಶನವನ್ನು ಪಡೆದಿದ್ದನು ಎಂಬುದಾಗಿ ತಿಳಿದು ಬರುತ್ತದೆ. ಎರಡನೆಯ ಸೋಮೇಶ್ವರನ ಮಂತ್ರಿಯಾಗಿದ್ದ ಸೋಮಾನಾಥನು ಜೈನಧರ್ಮದ ಅನುಯಾಯಿಯಾಗಿದ್ದನು.

ಬನವಾಸಿ ಮಾಂಡಳಿಕನಾಗಿದ್ದ ಕಲ್ಲ ಎಂಬುವನು ಶಾಂತಿನಾಥ ಬಸದಿಯನ್ನು ನಿರ್ಮಿಸಿದನು ಎಂಬುದಾಗಿ ಬಳ್ಳಿಗಾವೆಯ ಶಾಸನದಿಂದ ತಿಳಿದುಬರುತ್ತದೆ. ಈ ಮನೆತನದ ಅರಸ ಆರನೇ ವಿಕ್ರಮಾದಿತ್ಯ ಶೈವ ಮತಾವಲಂಭಿಯಾಗುವುದಕ್ಕಿಂತ ಮುಂಚೆ ಜೈನನಾಗಿದ್ದನು. ಸುಪ್ರಸಿದ್ಧ ಜೈನ ಭಕ್ತೆ **"**ಅತಿ ಮಬ್ಬೆ**"** ದಾನಚಿಂತಾಮಣಿ ಎಂಬ ಪ್ರಸಿದ್ಧಿ ಪಡೆದಿದ್ದಳು. ಚಾಲುಕ್ಯರ ಕಾಲದಲ್ಲಿ ದಿಗಂಬರ ಪಂಥ ಹೆಚ್ಚು ಜನರನ್ನು ಆಕರ್ಷಿಸಿತು. ಆದರೂ ಜೈನಧರ್ಮ ಮತ್ತು ವೀರಶೈವ ಧರ್ಮಕ್ಕೂ ಘರ್ಷಣೆ ಪ್ರಾರಂಭವಾಗಿ ಅಂತಿಮವಾಗಿ ವೀರಶೈವ ಧರ್ಮ ತನ್ನ ಮೇಲುಗೈಯನ್ನು ಪಡೆದುಕೊಂಡಿತು. ಚಾಲುಕ್ಯರ ಕಾಲದಲ್ಲಿ ಜೈನಧರ್ಮದಂತೆ ಬೌದ್ಧ ಧರ್ಮವೂ ಕೂಡ ಅಸ್ತಿತ್ವದಲ್ಲಿದ್ದರೂ ಅದರ ಪ್ರಭಾವ ಇಳಿಮುಖವಾಗಿತ್ತು. ಆದರೂ ಕೆಲವು ಸ್ಥಳಗಳಲ್ಲಿ ಬೌದ್ಧಧರ್ಮದ ಅನುಯಾಯಿಗಳು ನೆಲೆಸಿದ್ದರು. ಬಳ್ಳಿಗಾವೆ, ಕೋಳಿವಾಡ ಮತ್ತು ಡಂಬಳ ಮಹಾಯಾನ ಬೌದ್ಧರ ಕೇಂದ್ರಗಳಾಗಿದ್ದವು. ಬಳ್ಳಿಗಾವೆಯಲ್ಲಿ ದಂಡನಾಯಕ ರೂಪಭಟ್ಟಯ್ಯ ಒಂದು ಬೌದ್ಧ ವಿಹಾರವನ್ನು ಮತ್ತು ತಾರಾಭಗವತಿ ದೇವಸ್ಥಾನವನ್ನು ಕಟ್ಟಿಸಿದನು. ಹಾಗೆಯೇ ತಾರಾಭಗವತಿ, ಬುದ್ಧ ವಿಹಾರ,

ವೈಜಯಂತಿ, ಕೇಶವ, ಲೋಹಿತೇಶ್ವರ ಬುದ್ಧನ ಪೂಜೆಗೋಸ್ಕರ ರಾಜದಿಂದ ದತ್ತಿಗಳನ್ನು ಪಡೆದಿದ್ದವು. ಒಟ್ಟಿನಲ್ಲಿ ಚಾಲುಕ್ಯರು ಧರ್ಮಸಹಿಷ್ಣುಗಳಾಗಿದ್ದುದರಿಂದ ಧಾರ್ಮಿಕ ಸಾಮರಸ್ಯ ನೆಲೆಯೂರಿತ್ತು ಮತ್ತು ಅನೇಕ ಶೈವ, ಜೈನ ಹಾಗೂ ಬೌದ್ಧ ಆಲಯಗಳು ನಿರ್ಮಾಣವಾದವು.

**ಪರಾಮರ್ಶನ ಗ್ರಂಥಗಳು**


- ಬಡಿಗೇರ ವಾಸುದೇವ. (2006). ಕರ್ನಾಟಕ ದೇವಾಲಯ ಕೋಶ ವಿಜಾಪುರ ಜಿಲ್ಲೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಬಾಲಸುಬ್ರಮಣ್ಯ ಹಾಗೂ ಇತರರು (1999). ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
- ಚಿದಾನಂದ ಮೂರ್ತಿ ಎಂ. (2001). ಕನ್ನಡ ಶಾಸನಗಳ ಸಂಸ್ಕೃತಿಕ ಅಧ್ಯಯನ. ಸಪ್ನ ಬುಕ್ ಹೌಸ್, ಬೆಂಗಳೂರು.
- ನಂದಿಮಠ ಎಸ್.ಸಿ. (1984). ಕರ್ನಾಟಕ ಧರ್ಮಗಳು ಭಾಗ–2. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
- ನಾಗಯ್ಯ ಜೆ.ಎಮ್. (1982). ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ. ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ.
- ನಾಗರಾಜು ಡಿ.ಎಮ್. (2012). ಕಲ್ಯಾಣ ಚಾಲುಕ್ಯ ಆರನೇ ವಿಕ್ರಮಾದಿತ್ಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಗೌತಮ್ ಪ್ರಕಾಶನ, ಮೈಸೂರು.
- ಸುರೇಶ ಕೆ.ಎಂ. ಮತ್ತು ಇತರರು (2001). ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ತರಿಕೆರೆ ರಹಮತ್. (2010). ಕರ್ನಾಟ ನಾದಪಂಥ. ಅಭಿನವ ಪ್ರಕಾಶನ, ಬೆಂಗಳೂರು.
- ತಿಪ್ಪೇರುದ್ರಸ್ವಾಮಿ. ಎಚ್. (1968). ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ವಿಶ್ವಾಸ್ ಪ್ರಿಂಟ್ಸ್, ಬೆಂಗಳೂರು.
- ವಾಸುದೇವನ್ ಸಿ.ಎನ್. (2012). ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.